## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೇಂದ್ರ ಸರ್ಕಾರದ ಹಾಗೂ ಕೇಂದ್ರ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆಗಳಿಗೆ ನೇಮಕಾತಿ ಮಾಡುವಲ್ಲಿ — ಮೀಸಲಾತಿ ನಿಯಮಾವಳಿಗಳನ್ನು ಅನುಸರಿಸುವ ಬಗ್ಗೆ

ಓದಲಾಗಿದೆ: ಕೇಂದ್ರ ಸರ್ಕಾರದ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ 36012-22-93 ಇಎಸ್‌ಟಿಟಿ (ಎಸ್‌ಸಿಟಿ) ರ ದಿನಾಂಕ: 8-9-1993

(2) ಕೇಂದ್ರ ಸರ್ಕಾರದ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ 36012-22-93- ಇಎಸ್‌ಟಿಟಿ (ಎಸ್‌ಸಿಟಿ) ರ ದಿನಾಂಕ: 22-10-93

(3) ಕೇಂದ್ರ ಸರ್ಕಾರದ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ 36012-22-93- ಇಎಸ್‌ಟಿಟಿ (ಎಸ್‌ಸಿಟಿ) ರ ದಿನಾಂಕ: 15-11-93

ಪ್ರಸ್ತಾವನೆ:

ಕೇಂದ್ರ ಸರ್ಕಾರದ ಹಾಗೂ ಕೇಂದ್ರ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆಗಳಿಗೆ ನೇಮಕಾತಿ ಕುರಿತಂತೆ ಇರುವ ಮೀಸಲಾತಿ ನಿಯಮಾವಳಿಗಳ ಮಂಡಲ್ ವರದಿಯ ಅನುಷ್ಠಾನದ ಬಗ್ಗೆ ರಾಷ್ಟ್ರ ಸರ್ವೋಚ್ಚ ನ್ಯಾಯಾಲಯವು ತೀರ್ಪನ್ನು ನೀಡಿದ್ದು ಇದರ ಮೇರೆಗೆ ಕೇಂದ್ರ ಸರ್ಕಾರವು ಮೀಸಲಾತಿ ನಿಯಮಾವಳಿಗಳ ಆದೇಶಗಳನ್ನು ಹಾಗೂ ಈ ಬಗ್ಗೆ ಅನುಸರಿಸಬೇಕಾದ ರೀತಿ ನಿಯಮಾವಳಿಗಳನ್ನು ಮತ್ತು ಈ ನಿಯಮಾವಳಿಗಳಿಗೆ ಹೊರತಾಗುವ ಅಭ್ಯರ್ಥಿಗಳ ಕುರಿತಂತೆ ನೀಡಿರುವ ತಜ್ಞರ ಸಮಿತಿಯ ವರದಿಯ ಅನುಷ್ಠಾನದ ಬಗ್ಗೆ ಸೂಚನೆಗಳನ್ನು ಮೇಲೆ ಓದಲಾಗಿರುವ ಅಧಿಕೃತ ಜ್ಞಾಪನಗಳಲ್ಲಿ ಹೇಳಲಾಗಿದ್ದು, ಈ ಸೂಚನೆಗಳನ್ನು ರಾಜ್ಯದ ಎಲ್ಲಾ ಅಧಿಕೃತ ಪ್ರಾಧಿಕಾರಗಳಿಗೆ ತಿಳಿಸುವಂತೆ ಕೇಂದ್ರ ಸರ್ಕಾರವು ನಿರ್ದೇಶನ ನೀಡಿದ್ದು, ಇದರ ಮೇರೆಗೆ ಸರ್ಕಾರವು ಸದರಿ ಅಧಿಕೃತ ಜ್ಞಾಪನಗಳ ಪ್ರತಿಗಳನ್ನು ಮುಂದಿನ ಸೂಕ್ತ ಕ್ರಮಗಳಿಗಾಗಿ ಎಲ್ಲಾ ಅಧಿಕೃತ ಪ್ರಾಧಿಕಾರಗಳಿಗೆ ಕಳುಹಿಸಿಕೊಡಲು ನಿರ್ಧರಿಸಿದ್ದು, ಈ ಆದೇಶಗಳನ್ನು ಹೊರಡಿಸುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ ಸಕಇ 22 ಬಸಿಬಿ 94 ಬೆಂಗಳೂರು ದಿನಾಂಕ: 22-2-94

ಕೇಂದ್ರ ಸರ್ಕಾರದ ಹಾಗೂ ಕೇಂದ್ರ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆಗಳಲ್ಲಿ ನೇಮಕಾತಿ ಮಾಡುವಾಗ ಅನುಸರಿಸಬೇಕಾದ ಮೀಸಲಾತಿ ನಿಯಮಾವಳಿಗಳ ಕುರಿತಂತೆ ಕೇಂದ್ರ ಸರ್ಕಾರವು ಹೊರಡಿಸಿರುವ ಸೂಚನೆಗಳ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸುತ್ತಾ ಮುಂದಿನ ಸೂಕ್ತ ಕ್ರಮಗಳನ್ನು ಈ ಬಗ್ಗೆ ತೆಗೆದುಕೊಳ್ಳುವಂತೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಎಸ್.ಕೆ. ಶ್ರೀಕಂಠಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

ಗೆ

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ, ಇದನ್ನು ವಿಶೇಷ ಪ್ರಕಟಣೆಯಲ್ಲಿ ಕೂಡಲೇ ಹೊರಡಿಸಲು ಕೋರಿ — ಹಾಗೂ ಇದರ 2000 ಮುದ್ರಿತ ಪ್ರತಿಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಕೋರಿ ಕಳುಹಿಸಲಾಗಿದೆ.

ಪ್ರತಿಯನ್ನು

1. ಕರ್ನಾಟಕ ಮಹಾಲೇಖಪಾಲರು, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು
3. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು : ಇಲಾಖಾ ಮುಖ್ಯಸ್ಥರು: ವಿಭಾಗಾಧಿಕಾರಿಗಳು: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್: ಜಿಲ್ಲಾಧಿಕಾರಿಗಳು : ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು : ತಹಶೀಲ್ದಾರರುಗಳು ಉಪ ವಿಭಾಗಾಧಿಕಾರಿಗಳು :
4. ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳು
5. ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು
6. ಎಲ್ಲಾ ಸಚಿವರುಗಳ ಆಪ್ತ ಕಾರ್ಯದರ್ಶಿಗಳು
7. ಶಾಖಾ ರಕ್ಷಿತ ಕಡತ : ಹೆಚ್ಚುವರಿ ಪ್ರತಿಗಳು